ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

ಸಿ.ಸಿ.ನಂ.**1739/2016.**

ದಿನಾಂಕಃ**25.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಕಿರಣ್ ಕುಮಾರ್ | ಚಾಸಾ-7, ಪ್ರಾಸ-7 |
| ತಂದೆ ಹೆಸರು | ಹೆಚ್ ಕೆ ಯರೆನಿಂಗಪ್ಪ | |
| ವಯಸ್ಸು | 34 ವರ್ಷ | |
| ಉದ್ಯೋಗ | ವೈದ್ಯಾಧಿಕಾರಿಗಳು, ಹಳೆಬೀಡು ಸ.ಆಸ್ಪತ್ರೆ | |
| ವಾಸ | ಕಡೂರು | |

ಮುಖ್ಯ ವಿಚಾರಣೆಃ ಮಾನ್ಯ ಸಸಅ ಅವರಿಂದಃ

ನಾನು ಕಡೂರು ಸರ್ಕಾರಿ ಆಸ್ಪತ್ರೆಯಲ್ಲಿ 2016 ನೇ ಇಸವಿಯಲ್ಲಿ ವೈದ್ಯನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ09.05.2016 ರಂದು ರಾತ್ರಿ 8.45 ಗಂಟೆ ಸಮಯದಲ್ಲಿ ಚಾಸಾ-2 ರವರು ಹಲ್ಲೆಗೊಳಗಾದ ಹಿನ್ನಲೆಯಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿರುತ್ತಾರೆ. ನಾನು ಚಾಸಾ-2 ರವರನ್ನು ಪರೀಕ್ಷಿಸಿದಾಗ ಚಾಸಾ-2 ರವರಿಗೆ ಕಣ್ಣಿಗೆ ಕಾಣುವಂತಹಃ ಗಾಯಗಳು ಕಂಡುಬಂದಿರುವುದಿಲ್ಲ, ಆದರೆ ಚಾಸಾ 2 ರವರು ಬೆನ್ನು ನೋವು ಇರುವುದಾಗಿ ನನ್ನ ಬಳಿ ಹೇಳಿರುತ್ತಾರೆ. ನನ್ನ ಅಭಿಪ್ರಾಯದಲ್ಲಿ ಸದರಿ ನೋವು/ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಈ ಬಗ್ಗೆ ನಾನು ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು, ಮತ್ತು ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸದರಿ ಬೆನ್ನು ನೋವು ಕಲ್ಲಿನಿಂದ ಅಥವಾ ದೊಣ್ಣೆಯಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ.

ಪಾಟೀ ಸವಾಲುಃಆರೋಪಿತರ ಪರ ಶ್ರೀ ಪಿ.ಆರ್.ಸಿ ವಕೀಲರ ಪರವಾಗಿ ಶ್ರೀ ಕೆ ಎಸ್ ಆರ್ ವಕೀಲರಿಂದಃ

ಚಾಸಾ-1 ನಿಪಿ 7 ರಲ್ಲಿ ಯಾವ ಗಾಯವಾಗಿದೆ ಎಂದು ನಮೂದು ಮಾಡಿಲ್ಲ

ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಬಿದ್ದರೆ ಬೆನ್ನು ಆಗುವ ಸಾದ್ಯತೆ ಇರುತ್ತದೆ ಎಂದರೆ ಸರಿ. ನಿಪಿ 7 ರಲ್ಲಿ ಹಲ್ಲೆ ಮಾಡಿದ್ದಾರೆ ಎಂದು ಹೇಳುವ ವ್ಯಕ್ತಿಗಳ ವಿಳಾಸ ನಮೂದು ಇಲ್ಲ ಎಂದರೆ ಸರಿ, ಅದರಲ್ಲಿ ಆ ಎಲ್ಲಾ ವಿವರಗಳನ್ನು ಬರೆಯಲು ಸಾದ್ಯವಾಗುವುದಿಲ್ಲ. ನಿಪಿ7 ನ್ನು ಚಾಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸೃಷ್ಟಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.